ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಬಹುಶಃ ಅದನ್ನು ನಾನು ವೆರಿಫೈ ಮಾಡಿಸುತ್ತೇನೆ. ನನ್ನಲ್ಲಿ ಇರತಕ್ಕಂಥ ವಿತರಣಾ ಕಾಲುವೆಗೆ ಸುಮಾರು ಕಿಲೋಮೀಟರ್ 0 ದಿಂದ 90 ರವರೆಗೆ ಎಲ್ಲಾ ವಿತರಣಾ ಕಾಲುವೆಗಳು ಪೂರ್ಣಗೊಂಡಿವೆ. ಎನ್ನತಕ್ಕಂಥ ಮಾಹಿತಿ ಇದೆ. ಆದರೆ ತಾವು ಅಂದರೆ ಡಿಸ್ಟಿಬ್ಯೂಟರೀಸ್ ಬಗ್ಗೆ ಬಹುಶಃ ತಾವು ಕೇಳತಕ್ಕಂಥದ್ದನ್ನು ನಾನು ಮಾಹಿತಿ ತರಿಸಿಕೊಂಡು ಅವರಿಗೆ ಒದಗಿಸಿ ಕೊಡುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ : ನಾನು ಈಗ ತಮಗೆ ಮಾಹಿತಿ ಕೊಡುತ್ತೇನೆ ಫೀಲ್ಡ್ ಕೆನಾಲ್ ಇದರಲ್ಲಿ ಇಲ್ಲ, ಇದರ ಬಗ್ಗೆ ಬಹಳಷ್ಟು ಮೀಟಿಂಗ್‌ನಲ್ಲಿ ಡಿಸ್‌ಕಸ್ ಆಗಿದೆ. ಕೇಂದ್ರ ಸರ್ಕಾರ ಇದು ಫೀಲ್ಡ್ ಕೆನಾಲ್‌ಗೆ ಕೊಡುತ್ತಿಲ್ಲ. ಇದೊಂದು ಏನು ಇದೆ ಈ ಮೇನ್ ಕೆನಾಲ್‌ಗೆ, ಡಿಸ್ಟಿಬ್ಯೂಟರ್ಸ್ ಸಲುವಾಗಿ ಇದರಲ್ಲಿ ಇದೆ. ಹೀಗಾಗಿ ತಾವು ದಯಮಾಡಿ ಫೀಲ್ಡ್ ಕೆನಾಲ್‌ಗೆ ರಾಜ್ಯ ಸರ್ಕಾರದ ಹಣ ಇಡಬೇಕು ಇಲ್ಲ ಅಂದರೆ ಬೇರೆ ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದನ್ನು ನಾನು ಮಾಹಿತಿ ತರಿಸಿ ಕೊಡುತ್ತೇನೆ. ಏಕೆಂದರೆ, ನನಗೆ ಮಾಹಿತಿ ಸಂಪೂರ್ಣವಾಗಿ ಬಂದಿಲ್ಲ. ಖಂಡಿತವಾಗಿ ನಾನು ಮಾಹಿತಿ ತರಿಸಿ ನಾನು ಅವರಿಗೆ ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು : ಶ್ರೀಮತಿ ಸುನೀತಾ ವೀರಪ್ಪ ಗೌಡರವರ ಪ್ರಶ್ನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾವಣೆಯಾಗಿರುತ್ತದೆ. ಮುಂದಿನ ಪ್ರಶ್ನೆ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ತಮ್ಮ ಪ್ರಶ್ನೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ತಮಗೆ ನಾನು ಕೈ ಮುಗಿದು ಪ್ರಾರ್ಥನೆ ಮಾಡುವುದು ಏನೆಂದರೆ, ತಾವು ದಯವಿಟ್ಟು ಆ ಪ್ರಶ್ನೆ ತರಿಸಿ ನೋಡಿ, ಪಿಡಬ್ಲ್ಯೂಡಿ ನಲ್ಲಿ ಗ್ರಾಮೀಣ ರಸ್ತೆಗಳು ಬರುವುದಿಲ್ಲವೆ? ಆ ಊರಿನ ಹೆಸರುಗಳ ಪಟ್ಟಿಯನ್ನು ಶ್ರೀಮತಿ ಸುನೀತಾ ವೀರಪ್ಪ ಗೌಡರವರು ನಿಮಗೆ ಕೊಡುತ್ತಾರೆ. ಯಾವನೋ ಅವನು ನಿಮ್ಮ ಅಧಿಕಾರಿ ಉತ್ತರ ಕೊಡುತ್ತಾನೆ ಅದನ್ನು ಮಂತ್ರಿಗಳು ನೋಡಿಕೊಳ್ಳದಿದ್ದರೆ, ಹೇಗೆ? ಈಗ ಪಿಡಬ್ಲ್ಯೂಡಿಗೆ ಗ್ರಾಮೀಣ ರಸ್ತೆಗಳು ಎಂದರೆ ಸ್ಪೆಸಿಫಿಕ್ ಆಗಿ ಪಿಡಬ್ಲ್ಯೂಡಿ ಗೆ ಸಂಬಂಧಪಟ್ಟ ರಸ್ತೆಗಳ ಬಗ್ಗೆ ಏನೆಂದು ಕೇಳಿದ್ದಾರೆ. ಅವರು ಹೀಗೆ ಉತ್ತರ ಕೊಟ್ಟರೆ ಹೇಗೆ? ಸಾರ್ ಈ ಅಧಿಕಾರಿಗಳಿಗೆ ಜವಾಬ್ದಾರಿ ಇದೆಯೇ?ನಾನು ನಮ್ಮ ಸಚಿವರ ಬಗ್ಗೆ ಆಕ್ಷೇಪಣೆ ಮಾಡುತ್ತಿಲ್ಲ. ಕಣ್ಣು ಮುಚ್ಚಿಕೊಂಡು ಬೇಜವಾಬ್ದಾರಿಯಿಂದ ಉತ್ತರ ಕೊಡಬಹುದೇನು? ಅಪರೂಪಕ್ಕೊಂದು ಪ್ರಶ್ನೆ ಬರುತ್ತದೆ. ಒಬ್ಬ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಏನು ಇದು ಇಲ್ಲಿ ಏನು ನಡೆಯುತ್ತದೆ ಅಧಿಕಾರಿಗಳನ್ನು ಹೇಳುವವರು ಕೇಳುವವರು ಇಲ್ಲವೆ? ನಾನು ಪಟ್ಟಿ ಕಳುಹಿಸಿ ಕೊಡುತ್ತೇನೆ. ಅಧಿಕಾರಿಗಳು ಕ್ಷಮಾಪಣೆ ಕೇಳಬೇಕಾಗುತ್ತದೆ. ಮಂತ್ರಿಗಳಿಂದ ನಾನು ಏನೂ ಅಪೇಕ್ಷೆ ಪಡುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) : ಸಾರ್, ಅದು ನನಗೆ ಬರುವುದಿಲ್ಲ. ಅದು ಜೆಡ್‌ಪಿ ಗೆ ಬರುತ್ತದೆ. ಗ್ರಾಮೀಣ ರಸ್ತೆಗಳು ಜೆಡ್‌ಪಿಗೆ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್, ನೀವು ಬೇಕಾದರೆ ತರಿಸಿ ನೋಡಿ. ಪಿಡಬ್ಲ್ಯೂಡಿ ನಲ್ಲಿ ಗ್ರಾಮೀಣ ರಸ್ತೆಗಳು ಬರುತ್ತದೆಯೋ ಇಲ್ಲವೋ ಎಂಬುದನ್ನು ದಯಮಾಡಿ ವೆರಿಫೈ ಮಾಡಿಸಿ. ನಾನು ನಿಮಗೆ ನೂರು ಹೆಸರುಗಳನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವುದರಿಂದ ಅದು ಬೇರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುವುದು ಏನೆಂದರೆ, ಆ ಎಂಡಿಆರ್ ಅವೆಲ್ಲಾ ಸೇರಿಕೊಂಡೇ ಅದರಲ್ಲಿ ಬರುವಂಥದ್ದು... ಸಾರ್ ನನ್ನ ಹತ್ತಿರ ಪಟ್ಟಿ ಇದೆ. ಇಲ್ಲಾಂದ್ರೆ ಏನು ಮಾಡಬೇಕು ನಿಮ್ಮ ಗ್ರಾಮೀಣಾಭಿವೃದ್ಧಿಗೆ ಟ್ರಾನ್ಸ್‌ಫರ್ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಗ್ರಾಮೀಣ ರಸ್ತೆಗಳು ಎಂದರೆ ಜಿಲ್ಲಾ ಪಂಚಾಯಿತಿಗೆ ಬರುತ್ತವೆ. ಅದಕ್ಕೆ ವರ್ಗ ಮಾಡಿ ಅವರು ಕೇಳಿದ ಉತ್ತರವನ್ನು ಕೊಡಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ಮಾಡಬಹುದಾಗಿತ್ತಲ್ಲಾ ಸಾರ್. ಗ್ರಾಮೀಣ ರಸ್ತೆಯಲ್ಲಿ ಪಿಡಬ್ಲ್ಯೂಡಿ ರಸ್ತೆ ಆ ಪಟ್ಟಿಯನ್ನು ಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಆಗಬಹುದು ನಾನು ಇಲ್ಲ ಎಂದು ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮ ಬಗ್ಗೆ ಅಲ್ಲ ಸಾರ್, ಬೇಕಾದರೆ ನೀವು ತರಿಸಿಕೊಂಡು ನೋಡಿ.

ಶ್ರೀ ಹೆಚ್.ಡಿ. ರೇವಣ್ಣ : ಗ್ರಾಮೀಣ ರಸ್ತೆ ಎಂದು ಹೇಳಿದ್ದಕ್ಕೆ ಅದು ವರ್ಗವಾಗಿದೆ.

(ಗೊಂದಲ)

ಅಧ್ಯಕ್ಷರು : ಗ್ರಾಮೀಣ ರಸ್ತೆಗಳು ಲೋಕೋಪಯೋಗಿ ಇಲಾಖೆಯಲ್ಲಿ ಇಲ್ಲ ಅದಕ್ಕಾಗಿ ವರ್ಗ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಹತ್ತು ನಿಮಿಷ ಲೇಟಾಗಲಿ, ಇಂಥ ಪ್ರಮುಖ ವಾದ ವಿಷಯಗಳು ಇರುವಾಗ ಎಲ್ಲದಕ್ಕೂ ಹೀಗೆ ಮಾಡಿದರೆ ನಾವು ಏನು ಮಾಡಬೇಕು ಹೇಳಿ.

ಶ್ರೀ ಗೋವಿಂದ ಎಂ ಕಾರಜೋಳ : ಈ ರಾಜ್ಯದಲ್ಲಿ ರಸ್ತೆಗಳನ್ನು 5 ಭಾಗಗಳನ್ನಾಗಿ ವಿಂಗಡಣೆ ಮಾಡಿದ್ದಾರೆ. (i) ವಿಲೇಜ್ ರಸ್ತೆ, (ii) ಓಡಿಆರ್ (iii) ಎಂಡಿಆರ್ (iv) ಸ್ಟೇಟ್ ಹೈವೆ (v) ನ್ಯಾಷನಲ್ ಹೈವೆ. ಕೆಲವು ಹಳ್ಳಿಗಳಲ್ಲಿ ಬರತಕ್ಕಂಥ ರಸ್ತೆಗಳು ಏನು ಇವೆ, ವಿಲೇಜ್ ರಸ್ತೆಗಳು ವಿ ಆರ್ ಕೂಡ ಪಿಡಬ್ಲ್ಯೂಡಿಗೆ ಸೇರಿದಂಥವುಗಳು ಇವೆ. ಓಡಿಆರ್ ಹಾಗೂ ಎಂಡಿಆರ್ ಕೂಡ ಸೇರಿದಂಥವುಗಳು ಇವೆ. ಸ್ಟೇಟ್ ಹೈವೇ ಮತ್ತು ನ್ಯಾಷನಲ್ ಹೈವೇ ಯಂತೂ ಪಿಡಬ್ಲ್ಯೂಡಿಗೆ ಇದ್ದೇ ಇವೆ. ಎಲ್ಲಾ ಹಳ್ಳಿಗಳ ರಸ್ತೆಗಳೇನೂ ಆರ್‌ಡಿಪಿಆರ್ ನಲ್ಲಿ ಇಲ್ಲ. ಏಕೆಂದರೆ, ತಪ್ಪು ಮಾಹಿತಿ ಈ ಸದನಕ್ಕೆ ಕೊಡುವುದು ಬೇಡ.....

1.00 ಪಿಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದನ್ನು ತಿಳಿದುಕೊಂಡು ಸಂಬಂಧಪಟ್ಟಂಥ ಅಧಿಕಾರಿಗಳು ತಿಳುವಳಿಕೆಯಿಂದ ಇನ್ನು ಮುಂದೆಯಾದರೂ ಜವಾಬ್ದಾರಿಯಿಂದ

ಉತ್ತರ ಕೊಡಲು ಒಂದು ಪ್ರಯತ್ನವನ್ನು ನಾವು ಮಾಡಿದ್ದೇವೆ. ಇದನ್ನು ಬಿಟ್ಟು ನಾವು ಬೇರೇನು ಮಾಡುವುದಕ್ಕೆ ಆಗುತ್ತದೆ. ಈಪಟ್ಟಿಯನ್ನು ತಾವು ನೋಡಿ. ಮತ್ತೆ ಇದನ್ನು ಮಾನ್ಯ ಮಂತ್ರಿಯವರಿಗೂ ಸಹ ಕಳುಹಿಸಿಕೊಡುತ್ತೇನೆ. ಆ ಗ್ರಾಮೀಣ ರಸ್ತೆ ಪಿ.ಡಬ್ಲ್ಯೂ.ಡಿ ಇಲಾಖೆಗೆ ಸೇರುವುದಿಲ್ಲವೆ? ಹೀಗಾದರೆ ಹೇಗೆ?

ಅಧ್ಯಕ್ಷರು : ಈ ಪ್ರಶ್ನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ವರ್ಗಾವಣೆ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಇವರಿಗೇ ಬರುತ್ತದೆ ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ. ನಾನು ಇದನ್ನು ಪರಿಶೀಲನೆ ಮಾಡಿ ಇದಕ್ಕೆ ಉತ್ತರವನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರಶ್ನೆಗಳು ಇನ್ನೊಂದು ದಿವಸದ ಪಟ್ಟಿಯಲ್ಲಿ ಬರುತ್ತದೆ. ಆಗ ಈ ಪ್ರಶ್ನೆಗೆ ಉತ್ತರ ಕೊಡಿಸಬಹುದು. ಆದರೆ, ನಾವು ತಪ್ಪು ಅಭಿಪ್ರಾಯ ಕೊಡುತ್ತಿದ್ದೇವೆಂದು ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದರು.

ಅಧ್ಯಕ್ಷರು : ಈ ಪ್ರಶ್ನೆಗೆ ಉತ್ತರ ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ರಸ್ತೆಗಳು ಜಿಲ್ಲಾಪಂಚಾಯತ್ ವ್ಯಾಪ್ತಿಗೆ ಬರುತ್ತದೆ. ಓ.ಡಿ.ಆರ್. ಮತ್ತು ಎಂ.ಡಿ.ಆರ್. ರಸ್ತೆಗಳು ಎಂದು ಹೇಳತಕ್ಕಂಥದ್ದು ಬೇರೆ...?

ಶ್ರೀ ಬಿ.ಎಸ್. ಯಡಿಯೂರಪ್ಪ : ಸಮಸ್ಯೆ ಏನು ಎನ್ನತಕ್ಕಂಥದ್ದು ತಮಗೆ ಗೊತ್ತಿದೆಯೆ? ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಕಳೆದ ಎರಡು ತಿಂಗಳಿಂದ ಸಚಿವರಿಲ್ಲ. ನಿಮಗೆ ಹೇಳುವವರು ಮತ್ತು ಕೇಳುವವರ್ಯಾರೂ ಇಲ್ಲ. ಚುನಾವಣೆ ಮತ್ತು ಬೇರೆ ಬೇರೆ ಕಾರಣಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಗಳೂ ಆಗುತ್ತಿಲ್ಲವೆಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈಗಾಗಲೇ ಉತ್ತರ ಕೊಡುವಂಥ ಸಂದರ್ಭದಲ್ಲಿ ಬಹಳ ಜವಾಬ್ದಾರಿಯುತವಾಗಿ ಈ ಮಾತನ್ನು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಇಲ್ಲಿ ಹೇಳುವವರು ಮತ್ತು ಕೇಳುವವರು ಯಾರು ಇಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಹೇಳುವವರು, ಕೇಳುವವರು ಯಾರು ಇದ್ದಾರೆ? ಗ್ರಾಮೀಣಾಭಿವೃದ್ಧಿ ಸಚಿವರು ಯಾರು ಇದ್ದಾರೆ ಎನ್ನತಕ್ಕಂಥದ್ದನ್ನು ಹಿರಿಯರು ಆಗಿರತಕ್ಕಂಥ ತಾವೇ ಹೇಳಿ.

ಅಧ್ಯಕ್ಷರು : ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು 107ನೇ ಪ್ರಶ್ನೆಯನ್ನು ಕೇಳಬೇಕು. ನಾನು ನಿಮಗೆ ಅವಕಾಶ ಕೊಟ್ಟಿದ್ದೇನೆ. ತಾವು ದಯಮಾಡಿ ಪ್ರಶ್ನೆಯನ್ನು ಕೇಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈಗಾಗಲೇ ಎದ್ದು ನಿಂತುಕೊಂಡಿದ್ದಾರೆ. ಆದರೂ ಸಹ ಪ್ರಶ್ನೆ ಕೇಳಿ ಎಂದು ತಾವು ನನಗೆ ಹೇಳುತ್ತಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನರಸೀಪುರ ತಾಲ್ಲೂಕಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕುರಿತು ಎಂದು ಲೋಕೋಪಯೋಗಿ ಇಲಾಖೆಗೆ ಈ ಪ್ರಶ್ನೆಯನ್ನು ಕೇಳಲಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಗಳು ಯಾವ್ಯಾವ ದಿವಸ ಉತ್ತರ ಕೊಡಬೇಕೆಂಬ ಲಿಸ್ಟ್ ಇದೆ. ಈ ಪ್ರಶ್ನೆ ಅಲ್ಲಿಗೆ ವರ್ಗಾವಣೆಯಾಗಿರುವುದರಿಂದ ಮುಂದೆ ಬರತಕ್ಕಂಥ ದಿವಸ ಇದಕ್ಕೆ ಉತ್ತರ ಕೊಡುತ್ತೇವೆ. ಅಕಸ್ಮಾತ್ ಇದು ತಪ್ಪಾಗಿರಬಹುದು. ಆದರೆ, ಯಾರು ಹೇಳುವವರು ಮತ್ತು ಕೇಳುವವರು ಇಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದು ಸರಿಯಲ್ಲ. ಇದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ಇದೆ.

ಶ್ರೀ ವಾಟಾಳ್ ನಾಗರಾಜ್ : ಖಂಡಿತ ಸರ್ಕಾರ ಇಲ್ಲಿ ಇಲ್ಲ.

(ಗೊಂದಲ)

ಅಧ್ಯಕ್ಷರು : ಇಲ್ಲಿಯವರೆಗೆ ಕೇವಲ ನಾಲ್ಕು ಪ್ರಶ್ನೆಗಳು ಮಾತ್ರ ಮುಗಿದಿವೆ. ಇನ್ನೂ 10 ಪ್ರಶ್ನೆಗಳನ್ನು ಕೇಳಬೇಕಾಗಿದೆ. ಈಗಾಗಲೇ ಒಂದು ಗಂಟೆ ಮುಗಿದುಹೋಗಿದೆ. ಪ್ರಶ್ನೋತ್ತರ ವೇಳೆ ಈಗಾಗಲೇ ಮುಗಿದಿದೆ. ಆದರೆ, ನಾಲ್ಕು ಪ್ರಶ್ನೆಗಳು ಮಾತ್ರ ಮುಗಿದಿದೆ. ಆದ್ದರಿಂದ ಪ್ರಶ್ನೋತ್ತರ ವೇಳೆನಡೆಸುವುದಕ್ಕೆ ದಯಮಾಡಿ ಎಲ್ಲರೂ ಸಹಕರಿಸಿ. ಹೊಸ ಹೊಸ ಸದಸ್ಯರು ಅನೇಕ ಪ್ರಶ್ನೆಯನ್ನು ಕೇಳಬೇಕೆಂದು ಕಾಯುತ್ತಿದ್ದಾರೆ. ಆದ್ದರಿಂದ ದಯಮಾಡಿ ಸಹಕರಿಸಿ.

ಶ್ರೀ ಜಗದೀಶ್ ಶೆಟ್ಟರ್ : ಮೂರು ತಿಂಗಳಿಂದ ಈ ಒಂದು ಇಲಾಖೆಗೆ ಸಚಿವರನ್ನು ನೇಮಕ ಮಾಡಿಲ್ಲ. ಮತ್ತೆ ಈಗ ಸರ್ಕಾರ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಹಾಗಾದರೆ, ವಿರೋಧಪಕ್ಷವು ಇಲ್ಲಿ ಇಲ್ಲವೆಂದು ನಾವು ಹೇಳುತ್ತೇವೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಸಹಕರಿಸಿ.

ಶ್ರೀ ವಾಟಾಳ್‌ನಾಗರಾಜ್ : ಸರ್ಕಾರ ಇದೆ ಎನ್ನುವುದಾದರೆ ಮಂತ್ರಿಮಂಡಲವನ್ನು ಬೇಗ ರಚನೆ ಮಾಡಬೇಕು.

ಅಧ್ಯಕ್ಷರು : ಅದರ ಬಗ್ಗೆ ಈಗ ಚರ್ಚೆ ಬೇಡ. ದಯಮಾಡಿ ಎಲ್ಲರೂ ಸಹಕರಿಸಿ.

ವಿಧಾನ ಸೌಧದ ಬಳಿ ನಿರ್ಮಾಣವಾಗುತ್ತಿರುವ ವಿಕಾಸ ಸೌಧದ ಕಾಮಗಾರಿ ಪ್ರಗತಿ

36 (107): ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಧಾನ ಸೌಧದ ಬಳಿ ವಿಕಾಸ ಸೌಧದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಇದರ ಅಂದಾಜು ವೆಚ್ಚವೆಷ್ಟು; ಹಾಗೂ ಇದುವರೆಗೆ ಖರ್ಚು ಮಾಡಿದ ಹಣವೆಷ್ಟು; ಈ ಕಾಮಗಾರಿಗಳು ಯಾವಾಗ ಪೂರ್ಣಗೊಳ್ಳಬೇಕಾಗಿತ್ತು;

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗುವ ಹಣವೆಷ್ಟು;

ಈ) ಈ ವಿಕಾಸ ಸೌಧದಲ್ಲಿರುವ ಒಟ್ಟು ಕೊಠಡಿಗಳ ಸಂಖ್ಯೆ ಎಷ್ಟು;

ಉ) ಇಲ್ಲಿಗೆ ಯಾವ ಯಾವ ಕಛೇರಿಗಳನ್ನ ಸ್ಥಳಾಂತರಿಸಲಾಗುವುದು;